ದಿನಾಂಕಃ 01-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲುಃ-</u> ಪ್ರತಿವಾದಿ ನಂ. 2 ರಿಂದ 4 ಪರ ಶ್ರೀ ಕೆ ಎಸ್ ಜೆ ವಕೀಲರಿಂದ**

ಆ ದಿವಸ 5-6 ಜನರು ದಸ್ತು ಬರೆಯಲು ಮಾಹಿತಿ ನೀಡಿಲು ಬಂದಿದ್ದರು. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಸಾಕ್ಷ್ಯ ಪ್ರಮಾಣಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ವ್ಯವಹಾರವು ಎಷ್ಟು ಮೊತ್ತಕ್ಕೆ ಆಯಿತು, ಎಷ್ಟು ಮೊತ್ತಕ್ಕೆ ಚೆಕ್ಕು ನೀಡಲಾಯಿತು ಎಂದು ನಾನು ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿಲ್ಲ. ಸಂಚಗಾರ ಪತ್ರಕ್ಕೆ ಇಬ್ಬರು ಜನ ಹೆಬ್ಬೆಟ್ಟು ಹಾಕಿರುತ್ತಾರೆ ಮತ್ತು ಇಬ್ಬರು ಜನ ಸಹಿ ಮಾಡಿರುತ್ತಾರೆ. ನನಗೆ 2010 ನೇ ಸಾಲಿನ ಪಹಣಿ ನೀಡಿದ್ದರು. ಪಹಣಿಯಲ್ಲಿ ಒಟ್ಟು 9 ಜನರ ಹೆಸರು ದಾಖಲು ಇದ್ದವು. ನಾನು ವಾದಿಯರೊಂದಿಗೆ ಶಾಮೀಲು ಆಗಿ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಚಗಾರ ಪತ್ರವನ್ನು ಯಾವ ಉದ್ದೇಶಕ್ಕಾಗಿ ಬರೆದು ಕೊಡಲಾಗಿರುತ್ತದೆ ಎಂದು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.